PROVIDING DRINKING WATER THROUGH BORE WELLS TO TALAGUPPA AND ANANDAPURAM VILLAGES IN SAGAR TALUK.

*Q.—898. Sri D. MOOKAPPA (Sagar).—

Will the Government be pleased to state:—

(*a*) whether it is a fact that action has been taken to provide drinking water through bore wells to Talaguppa village and Talaguppa Hobli and Anandapuram Village in Sagar Taluk;

(*b*) if so, the expenditure incurred on this so far (village-wise)?

*A.—Sri T. SUBRAMANYA (Minister for Development and Local Self-Government).—

(*a*) Yes.

(*b*) Talaguppa: Rs. 29,963, Anandapuram: Rs. 21,049 (Upto end of June 1961).

ಶ್ರೀ ಡಿ. ಮೂಕಪ್ಪ.—ಕುಡಿಯುವ ನೀರಿನ ಬಗ್ಗೆ ಕಾರ್ಯಕ್ರಮ ತೆಗೆದು ಕೊಂಡಿದ್ದೀವೆ ಎಂದು ಹೇಳಿದ್ದೀರಿ ಎಷ್ಟು ವರ್ಷ ಆಯಿತು ಸ್ವಾಮಿ ?

† ಶ್ರೀ ಟಿ. ಸುಬ್ರಹ್ಮಣ್ಯ.—ಈ ಕಾರ್ಯಕ್ರಮ ಕ್ಯೈಕೊಂಡು ಐದು ವರ್ಷ ಆಗಿ ಹೋಯಿತು.

ಶ್ರೀ ಡಿ. ಮೂಕಪ್ಪ.—ಹಾಗಾದರೆ ಈಗ ಕುಡಿಯುವ ನೀರು ಸಪ್ಲೈ ಆಗುತ್ತಿದೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ಇನ್ನು ಇಲ್ಲ. ಎರೆಕ್ಟ್ರಿಸಿಟಿ ಪೋಲ್ಸ್ ಹಾಕುವುದಕ್ಕೆ ಕಾದಿದ್ದಾರೆ ಎಂದು ಎಕ್ಸಿಕ್ಯೂಟೀವ್ ಇಂಜನಿಯರು ಬರೆಯುತ್ತಾರೆ ಮತ್ತು ಎರಡು-ಮೂರು ತಿಂಗಳೊಳಗಾಗಿ ಮುಗಿಸಿ ಕೊಡುತ್ತೇನೆ ಎಂದು ತಿಳಿಸಿದ್ದಾರೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ಸ್ಕೀಮು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಇತ್ತು ಈಗಾಗಲೆ ಎರಡನೇ ಪಂಚವಾರ್ಷಿಕ ಯೋಜನೆ ಮುಗಿದು ಮೂರನೇ ಪಂಚವಾರ್ಷಿಕ ಯೋಜನೆಗೆ ಕಾಲಿಡುತ್ತಾ ಇದ್ದೀರಿ ಈ ತಾಳಗುಪ್ಪ ಮತ್ತು ಆನಂದಪುರದ ಪ್ರೊಟಕ್ಟೆಡ್ ವಾಟರ್ ಸಪ್ಲೈ ಸ್ಕೀಂ ಪ್ರೊಪೈನಲಿಕ್ಕೆ ಕಾಲ ನಿಗದಿ ಏನಾದರೂ ಮಾಡಿದ್ದೀರಾ ?

ಶ್ರೀ ಟಿ. ಸುಬ್ರಹ್ಮಣ್ಯ.—ಬಹಳ ದಿವಸ ನಿಧಾನವಾಗಿದೆ ಎನ್ನುವುದು ಈ ಪ್ರಶ್ನೆ ಕಳುಹಿಸಿದ ಮೇಲೆ ಈಗ ನನ್ನ ಗಮನಕ್ಕೆ ಬಂದಿದೆ ಇಷ್ಟು ನಿಧಾನವಾಗಬಾರದಾಗಿತ್ತು ಎಂದು ನನ್ನ ಅಭಿಪ್ರಾಯ ಆನಂದಪುರದಲ್ಲಿ ಬೋರ್‌ವೆಲ್ ಫಲಪ್ರದವಾಗಲಲ್ಲ ಬ್ಯಾಕೆಟ್ ವೆಲ್ ಅಥವಾ open well ಗೆ ಎಸ್ಟಿಮೇಟ್ ಮಾಡುತ್ತಾ ಇದ್ದರು ಆಮೇಲೆ ನಿಧಾನವಾಗಿದೆ ತಾಳಗುಪ್ಪದಲ್ಲಿ ಎಲ್ಲಾ ಕೆಲಸ ಮುಗಿದಿದೆ ಎಲ್ಲ ಹೋದರೂ ಎರೆಕ್ಟ್ರಿಸಿಟಿ ಲೈನ್ ಹಾಕುವುದೊಂದು ಪಂಪ್ ಇನ್‌ಸ್ಟಾಲ್ ಮಾಡುವುದೊಂದು ಮೆಷಿನರಿ ಸಿದ್ಧವಾಗಿದೆ ಎರಡು-ಮೂರು ತಿಂಗಳಿನಲ್ಲಿ ಮುಗಿಸುತ್ತೇವೆ ಎಂದು ಬರೆಯುತ್ತಾರೆ.